ಮೈಸೂರ ಗೆಜಿಟ್.

ಸಂ. XXXVIII] ಸರ್ಕಾರದಿಂದ ಪ್ರಾಮುಖ್ಯವುಳ್ಳದ್ದು. [ನಂ. 43.

ಬೆಂಗಳೂರು, ಗುರುವಾರ, ನವೆಂಬರ್ ತಾ|| 5, ಸನ 1903.

IIನೆ ಭಾಗ.

ಇಂಡ್ಯುಗವರ್ನಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜ್‌ಗಳು ಮುಂತಾದವರ ಕಡೆಯಿಂದ ಕೊಡಿಸೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್ ಇಲಾಖೆ.

ಇಸ್ತಿಹಾರ್‌ನಾಮೆ.

ನಂಬರು 417, ತಾರೀಖು 27ನೆ ಅಕ್ಟೋಬರ್ 1903.

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವದಕ್ಕೋಸ್ಕರ ಪ್ರಕಟಿಸಲ್ಪಡುವದೇನಂದರೆ,—ಚಿತ್ರದುರ್ಗ ಡಿಸ್ಟ್ರಿಕ್ಟ್ಟು ದಾವಣಗೇರಿ ತಾಲ್ಲೂಕಿನ 255 ಸರಕಾರಿ ಗ್ರಾಮಗಳ ರಿವಿಜ್ಡ್ ಸರ್ವೆ ಜಮಾಬಂದಿಯಾನೆ ತಿದ್ದುಪಡಿಯಾದ ಸರ್ವೆ ಆಕಾರವು ಗವರ್ನ್‌ಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟಿರುವದ್ದರಿಂದ ಲ್ಯಾಂಡ್ ರೆವಿನ್ಯೂ ಕೋಡ್ 113ನೆ ಸೆಕ್ಷನ್ ಮೇರಿಗೆ ಅದನ್ನು ಬಹಿರಂಗವಾಗಿ ಘೋಷಿಸ್ಮಾಡಲ್ಪಡುವ ಕೆಲಸವೂ ಸನ 1903ನೆ ಇಸವಿ ನವೆಂಬರು 25ನೆ ತಾರೀಖಿನಲ್ಲಿ ಅಥವಾ ಆ ಸುಮಾರಿನಲ್ಲಿ ದಾವಣಗೇರೆಯಲ್ಲಿ ಪ್ರಾರಂಭಿಸಲ್ಪಡುವದು.

ನಂ. 440—ತಾರೀಖು 5ನೆ ನವೆಂಬರ್ 1903ನೆ ಇಸವಿ.

ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಕೇರಿದ ಹಾಲ ಹಿರಿಯೂರು ತಾಲ್ಲೂಕಿನಲ್ಲಿರುವ 149 ಮತ್ತು ಹೊಸದಾಗಿ ಫಿರ್ಕಾಟಾದ ಹೊಸದುರ್ಗ ತಾಲ್ಲೂಕಿನ ಬಾಬತು 55 ಜುಮ್ಲಾ 204 ಸರಕಾರಿ ಗ್ರಾಮಗಳಲ್ಲಿ ರಿವಿಜ್ಯಾನೆ ತಿದ್ದುಪಡಿಯಾದ ಆಕಾರವನ್ನು ಗವರ್ನ್‌ಮೆಂಟಿನವರು ಮಂಜೂರು ಮಾಡಿರುವದ್ದರಿಂದ ಲ್ಯಾಂಡ್ ರೆವಿನ್ಯೂ ಕೋಡ್ 113ನೆ ಸೆಕ್ಷನ್ ಪ್ರಕಾರ ಅದನ್ನು ಘೋಷಿಸ್ಮಾಡತಕ್ಕ ರಿವಿಜ್ಡ್ ಸೆಟ್ಲ್‌ಮೆಂಟ್ ಕೆಲಸವು ಹಿರಿಯೂರ ಮೊಕ್ಕಾಮಿನಲ್ಲಿ 1903ನೆ ಇಸವಿ ಡಿಸೆಂಬರು ತಾರೀಖು 8ರಲ್ಲು ಅಥವಾ ಆ ಸುಮಾರಿಗೆ ಪ್ರಾರಂಭಿಸಲ್ಪಡುವದೆಂದು ಸಕಲ ಜನಗಳಿಗೂ ತಿಳಿಯಪಡಿಸುವದಕ್ಕೋಸ್ಕರ ಈ ಮೂಲಕ ಪ್ರಸಿದ್ಧಪಡಿಸಿ ಇಹೆ.

ಜೆ. ಪಿ. ಗ್ಯಾಂಟ್,

ಸರ್ವೆ ಮತ್ತು ಸೆಟ್ಲಮೆಂಟ್ ಕಮಿಷನರ್, ಮೈಸೂರ್.

ಫಾರೆಸ್ಟ್ ಇಲಾಖೆ.

ನೋಟಿಸು.

1903ನೆ ಇಸವಿ ಆಗಷ್ಟು ತಿಂಗಳು 27ನೆ ತಾರೀಖಿನ IIನೆ ಭಾಗದ 467ನೆ ಪುಟದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟುಗಳ ಪಸಾರೆ ಜೆನಸಿ ಜಮಾವಣಿ ಹಕ್ಕನ್ನು ಹರಾಜು ಮಾಡಲ್ಪಡುತ್ತದೆಂದು ಘೋಷಿಸಿರುವದು ಸರಿಯಷ್ಟೆ. ಆದರೆ ಅವುಗಳಲ್ಲಿ ಮಳವಳ್ಳಿ ತಾಲ್ಲೂಕಿನ ಪಸಾರೆ ಜೆನಸಿ ಜಮಾವಣಿ ಹಕ್ಕನ್ನು 1903ನೆ ಇಸವಿ ನವೆಂಬರು 17ನೆ ತಾರೀಖಿನಲ್ಲಿ ಮಳವಳ್ಳಿ ತಾಲ್ಲೂಕು ಕಛೇರಿಯಲ್ಲಿ ಅಮಲ್‌ದಾರ್‌ರವರ ಮತ್ತು ರೇಂಜಾಫೀಸರವರ ರೂಬರೂ ಹರಾಜು ಹಾಕಲ್ಪಡುತ್ತಾಗಿ ಇದರಿಂದ ಯಲ್ಲರಿಗೂ ತಿಳಿಸಲ್ಪಟ್ಟಿದೆ.

ಸಿ. ಅಪ್ಪಯ್ಯ,

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ತಾರೀಖು 9ನೆ ಅಕ್ಟೋಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ: ಹಾಲಿ ಕೆಲಸದಿಂದ ನಿವೃತ್ತಿ ಮಾಡಲ್ಪಟ್ಟಿರುವ ಫಾರೆಸ್ಟ್ ಗಾರ್ಡು ಭೀಮಯ್ಯ ಎಂಬವನಿಗೆ ಸಲ್ಲಬೇಕಾದ 1901ನೆ ಇಸವಿ ಮೇ, ಜುಲೈ ಮತ್ತು ಆಗಸ್ಟು ಮಾಹಿಗಳ ಭತ್ಯಾ ಮೊಬಲಗು ರೂ. 5—2—6 ಹೊಳಲ್ಕೆರೆ ಫಾರೆಸ್ಟು ರೇಂಜು ಆಫೀಸಿನಲ್ಲಿರುತ್ತದೆ. ಸದರಿ ಭೀಮಯ್ಯನಾಗಲಿ ಅಥವಾ ಅವನ ನ್ಯಾಯವಾದ ಹಕ್ಕುದಾರನಾಗಲಿ ಈ ತಾರೀಖು ಲಾಗಾಯಿತು ಎರಡು ತಿಂಗಳೊಳಗಾಗಿ ಹೊಳಲ್ಕೆರೆ ಫಾರೆಸ್ಟು ರೇಂಜು ಆಫಿಸರವರಲ್ಲಿ ಹಾಜರಾಗಿ ಅವರಿಂದ ಮೇಲ್ಕಂಡ ರೂ. 5—2—6ನ್ನು ತಗದುಕೊಳ್ಳಲು ತಪ್ಪಿದಲ್ಲಿ ಮೊಬಲಗು ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಗುತ್ತೆ.

ನೋಟಿಫಿಕೇರ್ಷ, ತಾರೀಖು 22ನೆ ಅಕ್ಟೋಬರ್ 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಚಿತ್ರದುರ್ಗದ ಡಿಸ್ಟ್ರಿಕ್ಟ್ ಹೊಳಲ್ಕೆರೆ ರೇಂಜಿನಲ್ಲಿ ಗುರ್ತು ಮಾಡಿರುವ ಈ ಕೆಳಗೆ ನಮೂದಾಗುವ ಕೂಪುಗಳಲ್ಲಿ ಸೌದೆಯನ್ನು ಈ ಕೆಳಗಣ ಷರತ್ತುಗಳಿಗೆ ವಳಪಟ್ಟು ಕಡದು ಸಾಗಿಸಿಕೊಳ್ಳುವ ಹಕ್ಕುದಾರಿಯು ಡಿಸ್ಟ್ರಿಕ್ಟ್ ಫಾರ೸್ಟ್ ಆಫಿಸರವರಿಂದ ಅಥವಾ ರೇಂಜು ಫಾರ೸್ಟ್ ಆಫಿಸರವರಿಂದ 1903ನೆ ಇಸವಿ ನವಂಬರು 30ನೆ ತಾರೀಖು ದಿವಸ ದಾವಣಗೆರೆ ತಾಲ್ಲೂಕು ಕೊಡಗನೂರು ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುವದು.

ಫಾರೆಸ್ಟ್ ಹೆಸರು.	ಕೂಪಿನ ನಾಮಸೂಚಕ ಸರ್ಕಲ್ ನಂಬರ್.	ಕೂಪಿನ ನಂಬರು.	ಸುಮಾರು ವಿಸ್ತೀರ್ಣ ಎಕರೆ.	ಕೂಪಿಯತಕ್ಕ ಮರಗಳ ಜಾತಿ.	ಒಂದು ಎಕರೆಗೆ ಸಿಕ್ಕಿ ಬಹುದಾದ ಸುಮಾರು ಮೊತ್ತ.	ರೈಲ್ವೇ ಸ್ಟೇಷನ್ನಿಗೆ ಫಾಸಲೆ.	ಕೂಪಿನ ಸರಹದ್ದು.
ನೀರ್ಥಡಿ ಸ್ಟೇಟ್ ಫಾರಸ್ಟು.	1	1	125 ಎಕರೆ	ಉದ್ದಿ, ಚನ್ನಂಗಿ, ತೂಪರೆ, ತಾರೆ, ಸೋಮೆ, ವಗೈರೆ	ಎಕರೆ ಬಂದಕ್ಕೆ ಸುಮಾರು 2 ಗಾಡಿ	ಹುಣಸೇಕಟ್ಟೆಗೆ 3 ಮೈಲಿ	ಕೂಪಿನ ಉತ್ತರ ಭಾಗದಲ್ಲಿ ಕೋಡೀಗುಂಡಿನಹಳ್ಳಿ ಸಮೀಪದಲ್ಲಿರುವ ಹಳೇ ಕಾಪೀಸು ಪ್ರದೇಶ ಚಕ್ಕು ಬಂದಿ—ಪೂರ್ವಕ್ಕೆ—ನರಗನಹಳ್ಳಿ ಗ್ರಾಮದ ಸರ್ವೆ 166 ಮತ್ತು 177ನೆ ನಂಬರುಗಳ ಮೂಲಕ ಹರಿಯತಕ್ಕ ಹಳ್ಳ. ದಕ್ಷಿಣಕ್ಕೆ—6 ಆಡಿ ಅಗಲವುಳ್ಳ ಪಾಕಾದ ಲೈನು. ಪಶ್ಚಿಮಕ್ಕೆ—ಡಿಮಾರ್ಕೇರ್ಷ ಲೈನು. ಕೂಪು ಬೆಟ್ಟ ಕಾಡು.
ಡಿಟೋ ...	II	I	160 ಎಕರೆ	ಡಿಟೋ	ಡಿಟೋ	ಸಾಸಲು ರೈಲ್ವೇ ಸ್ಟೇಷನ್ನಿಗೆ 6 ಮೈಲಿ	ಉತ್ತರಕ್ಕೆ — ಉದ್ದಿಗೆರೆ, ದೊಡ್ಡಿಗನಹಾಳು ಕಾಲುದಾರಿ. ಪೂರ್ವಕ್ಕೆ—ಕೂಪುಲೈನು. ದಕ್ಷಿಣಕ್ಕೆ—ಮದಕೆರಿ ಪುರ, ಸಾಸಲು ಭಂಡಿಜಾಡು. ಪಶ್ಚಿಮಕ್ಕೆ—ಡಿಮಾರ್ಕೇರ್ಷ [illegible].
ಡಿಟೋ ...	IV	1	153 ಎಕರೆ	ಡಿಟೋ	ಎಕರೆ ಬಂದಕ್ಕೆ 1 ಗಾಡಿ	ಸಾಸಲು ರೈಲ್ವೇ ಸ್ಟೇಷನ್ನಿಗೆ 10 ಮೈಲಿ	ಕೂಪಿನ ಪೂರ್ವ, ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಡಿಮಾರ್ಕೇರ್ಷ ಲೈನು. ಉತ್ತರಕ್ಕೆ ಕೂಪು ಲೈನು.
ಮಲೇ ಬೆನ್ನೂರು ಸ್ಟೇಟ್ ಫಾರೆಸ್ಟು.	1	1	104	ಡಿಟೋ	ಎಕರೆ ಬಂದಕ್ಕೆ 2 ಗಾಡಿ	ಹರಿಹರದ ರೈಲ್ವೇ ಸ್ಟೇಷನ್ನಿಗೆ 18 ಮೈಲಿ	ಉತ್ತರಕ್ಕೆ—ಹಳೇ ಕಾಪೀ ಸುಪ್ರದೇಶವನ್ನು 1ನೆ ನಂ. ಕೂಪಿನಿಂದ ಪ್ರತ್ಯೇಕಿಸತಕ್ಕ ಹಳ್ಳ. ಪೂರ್ವಕ್ಕೆ— ಆರಕೆರೆ ಮತ್ತೂ ದೊಡ್ಡ ಯರಬು ಇವುಗಳ ಮಧ್ಯೆ ಇರುವ ಕಣಿವೆ. ದಕ್ಷಿಣಕ್ಕೆ—ಕರಿಯಂಣನ ಹಟ್ಟಿಹಳ್ಳ. ಪಶ್ಚಿಮಕ್ಕೆ— ಡಿಮಾರ್ಕೇರ್ಷ ಲೈನು.
ಡಿಟೋ	II	1	136	ಡಿಟೋ	ಎಕರೆ ಬಂದಕ್ಕೆ 1 ಗಾಡಿ	ಹರಿಹರದ ರೈಲ್ವೇ ಸ್ಟೇಷನ್ನಿಗೆ 15 ಮೈಲಿ	ಉತ್ತರ ಮತ್ತು ಪಶ್ಚಿಮಕ್ಕೆ—ಡಿಮಾರ್ಕೇರ್ಷ ಲೈನು. ಪೂರ್ವ ಮತ್ತು ದಕ್ಷಿಣ ದಿಕ್ಕಿಗೆ 6 ಆಡಿ ಅಗಲವುಳ್ಳ ಪಾಕಾದ ಲೈನು.
ಗರ್ಗಾ ಕಾವಲು.	1	1	71	ಡಿಟೋ	ಎಕರೆ ಬಂದಕ್ಕೆ 2 ಗಾಡಿ	ರಸ್ತೆಗೆ 5ಮೈಲಿ	ಉತ್ತರ, ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಕೂಪು ಲೈನು. ಪೂರ್ವಕ್ಕೆ— ಗರಗದ ಹಳ್ಳ.

ಫಾರೆಸ್ಟ್ ಹೆಸರು.	ಕೆಲಸ ಮಾಡುವ ಸರ್ಕಲ್ ನಂಬರ್.	ಕೂಪ್ ನಂಬರು.	ಸುಮಾರು ವಿಸ್ತೀರ್ಣ ಎಕರೆ.	ಕಡಿಯುತ್ತಕ್ಕ ಜಾತಿ ಗಳ ಹೆಸರು.	ಒಂದು ಎಕರೆಗೆ ಸುಮಾರು ಬೆಲೆಯಾಗುವ ರೂ ನೋಡಿ.	ಲೈಟ್ ಸೆಲ್ವೇಗ ಸೌಲಭ್ಯ.	ಕೂಪಿನ ಸರಹದ್ದು.
ದೇವರಗುಡ್ಡ ಫಾರೆಸ್ಟ್	1	1	200	ಉದ್ದಿ, ಜನ್ನಂಗಿ, ತೂಪರೆ, ತಾರೆ, ಸೋವೆ, ವಗೈರೆ	ಎಕರೆ ಬಂದಕ್ಕೆ 1 ಗಾಡಿ	ರಸ್ತೆಗೆ 3ಮೈಲಿ	ಉತ್ತರಕ್ಕೆ – ಕೈಬಿಟ್ಟಹುಣಸೇ ಮತ್ತೂ ಮಾವಿನಕಟ್ಟೆ ಕಣಿವೆ ಇವುಗಳನ್ನು ಪ್ರತ್ಯೇಕಿಸತಕ್ಕ ಕೊರಕಲು. ಪೂರ್ವಕ್ಕೆ – ತಿಮ್ಮಯ್ಯಂಹೇಬು ಕೆರೆ (ಬಡದಕೆರೆ). ದಕ್ಷಿಣಕ್ಕೆ – ಮಾವಿನಕಟ್ಟೆ, ದೊಡ್ಡಗಟ್ಟದ ಹಳೇ ಬಂಡಿ ಜಾಡು. ಪಶ್ಚಿಮಕ್ಕೆ – ಡಿವಾರ್ಕೇಷನ್ ಲೈನು.
ಡಿಟೋ	II	1	136	ಉದ್ದಿ, ಜನ್ನಂಗಿ, ತಾರೆ ವಗೈರೆ	ಡಿಟೋ	ರಸ್ತೆಗೆ 6ಮೈಲಿ	ಉತ್ತರಕ್ಕೆ – ಸನ್ಯಾಸಿಹಳ್ಳಿ ಕೆರೆಯಿಂದ ಹೊನ್ನೇನಹಳ್ಳಿಗೆ ಹೋಗತಕ್ಕ ದಾರಿ. ಪೂರ್ವಕ್ಕೆ – ಹೊನ್ನೇನಹಳ್ಳಿ ಸವಿಾಪದಲ್ಲಿರುವ ಡಿವಾರ್ಕೇಷನ್ ಲೈನು. ದಕ್ಷಿಣಕ್ಕೆ – ಹೊನ್ನೇನಹಳ್ಳಿ ಮತ್ತು ಗೊರವಿನಹಾಳ ಗಡಿ. ಪಶ್ಚಿಮಕ್ಕೆ – ಕಣಿವೆಸಂಗನ ಹಳ್ಳಿ ಗಡಿ.

II. ಈ ಹರಾಜು ಫಾರೆಸ್ಟು ಕ್ಯಸರ್‌ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ. III. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವೂ ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ಯಮ ನಡಿಸುವ ಆಫಿಸರನ ರಿಗೆ ಅಧಿಕಾರವಿರುತ್ತೆ. IV. ಸವಾಲ್ದಾರನು ಸವಾಲು ಮಾಡುವದಕ್ಕೆ ಮುಂಚೆಯೇ 25 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾ ಡಬೇಕು. ಆ ವೊಬಲಗು ಮಂಜೂರಾದ ಸವಾಲ್ದಾರನ ಹೆರ್ತು ಹರಾಜು ಕೈದಾದವೇಲೆ ಇತರರದು ವಾಪಸು ಮಾಡಲ್ಪಡುವದು. ಆ ವೊಬಲಗನ್ನು ಮತ್ತು ಪರತ್ತು ಮೇರೆ ನಡಿಯಲು ಮಂಜೂರಾದ ಸವಾಲ್ದಾರನು ಇಡಬೇಕಾದ 25 ರೂಪಾಯಿ ಜುಮ್ಲಾ 50ರೂಪಾಯಿಗಳನ್ನು ಗೌರ್ಮಂಟು ಸೇವಿಂಗ್ಸು ಬ್ಯಾಂಕಿನಲ್ಲಿ ಇಡುತ್ತೆ. V. ಮಂಜೂರಾದ ಸವಾಲದಾರನು ಪ್ರತಿ ಸೌದೆ ಮೊತ್ತ ಅಳತೆಯಾದಹಾಗೆಲ್ಲಾ ಅಂಥಾ ಸೌದೆ ಮೊತ್ತದ ಕಿಮ್ಮತ್ತನ್ನು ಪಾವತೀ ಮಾಡಬೇಕು. ಮತ್ತು ಸರಿಯಾದ ಸ್ಟ್ಯಾಂಪು ಕಾಗದದಲ್ಲಿ ಈ ಕೆಳಗಣ ಪರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದು ಕೊಡಬೇಕು. ತಪ್ಪಿದಲ್ಲಿ ಕೂಪು ಯಾ ಕಂಪಾರ್ಟುಮೆಂಟನ್ನು ಪುನಹ ಹರಾಜು ಮಾಡಿಸಲಾದೀತು. ದುಸರಾ ಹರಾಜಿನಲ್ಲಿ ಏನಾದರೂ ಲುಕ್ಸಾನು ಬಂದರೆ ಮೊದಲಿನ ಹರಾಜುದಾರನು ಭರ್ತೀ ಮಾಡಿಕ್ಕೊಡಬೇಕು. ಆದರೆ ಫಾಯಿದೆ ಏನಾದರೂ ಬಂದರೆ ಅಂಥಾ ಫಾಯಿದೇಗೆ ಈತನು ಭಾಗಿಯಾಗುವದಿಲ್ಲ.

ಪ ರ ತ್ತು ಗ ಳು .

(1) ಸಂದಲ್, ತ್ಯಾಗ, ಹೊನ್ನೆ, ಆಳಲೆ, ಹುಣಸೆ, ಜಾಲಾರಿ ಗಿಡಗಳು, ಎಕರೆ ಬಂದಕ್ಕೆ ಸರಾಸರಿ 40ರ ಕಿಂತ ಜಾಸ್ತಿ ಇಲ್ಲದೆ ಗುರ್ತು ಮಾಡಿರುವ ಮತ್ತು ಸೊಪ್ಪಿಗಳು ಅಂದರೆ ಸುತ್ತು ಅಳತೆ ಬಂದು ಅಡಿ ವಳಗಿರುವ ಗಿಡಗಳು. ಇವುಗಳನ್ನು ಬಿಟ್ಟು ಎಲ್ಲಾ ಗಿಡಗಳನ್ನೂ ಭೂಮಿ ಮಟ್ಟಕ್ಕೆ ಸರಿಯಾಗಿ ಕತರಾಯಿಸಬೇಕು. (2) ಸೌದೆಯನ್ನು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ಉಂಟಾದರೆ ಕಂಟ್ರಾಕ್ಟುದಾರನು ಡಿ॥ ಫಾ॥ ಆ॥ ಸರವರು ಗೊತ್ತು ಮಾಡುವ ಲುಕ್ಸಾನ್ ವೊಬಲಗನ್ನು ಸರ್ಕಾರಕ್ಕೆ ಪಾವತೀ ಮಾಡಬೇಕು. (3) ತಂಗಡಿ ಮತ್ತೂ ಕಕ್ಕೆ ಇವುಗಳು ಈ ಹರಾಜಿನಲ್ಲಿ ಸೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಅಂದರೆ ಬ್ಯಾಲ ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಹುಣಸೇ ಅಳಲೇ ಇವೇ ಮೊದಲಾದ ಯಾವದೂ ಹರಾಜಿಗೆ ಸೇರಿ ಇಲ್ಲ. ಉಳಿಸಿಕ್ಕೊಂಡಿರುವ ಸಂದಲ್, ಅಳಲೆ, ಹುಣಸೇ, ಗುರ್ತಿಗೋಸ್ಕರ ಬಿಟ್ಟಿರುವ ಮರಗಳ ವಿನಹ ಕಡಿಯಬಹುದಾದ ಇನ್ಯಾವ ಮರಗಳನ್ನು ಆದರೂ ಮನ್ಯಾನೆಯಾಗಿ ಕಡದರೆ ಅಂಥಾದ್ದೆಲ್ಲಾ ಇಲಾಖಾ ಮೌರೀಫತ್ತು ಕಾಪೀನ್ ಮಾಡಿಸಿ ತಗಳುವ ಲಾಗವಡನ್ನು 50 ರೂಪಾಯಿನ ಕೆಕ್ಯೂಟಿ ಹಣದಿಂದ ವಸೂಲ್ಮಾಡುತ್ತೆ. (4) ಸೌದೆ ಮತ್ತು ಚೌಬೀನೆ ಕತರಾವ ಣೆ ಮತ್ತು ಸಾಗಿಸತಕ್ಕದ್ದನ್ನೆಲ್ಲ 1904ನೆ ಇಸವಿ ಜೂ ಆಖೈರುವಳಗಾಗಿ ಪೂರೈಸಿಕೊಳ್ಳಬೇಕು. ಹಾಗೆ ಮಾಡದೇ ಇದ್ದರೆ ಕಂಟ್ರಾಕ್ಟುದಾರನು ಪಾವತೀ ಮಾಡಿರುವ ವೊಬಲಗನ್ನು ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಮೇಲ್ಕಂಡ ಸೌದೆ ಮತ್ತು ಚೌಬೀನೆ ಕತರಾವಣೆ ವ ಸಾಗಿಸತಕ್ಕ ಹಕ್ಕುದಾರಿಯು ಸಹಾ ಆ ತಾರೀಖಿನಿಂದ ರದ್ದು ಆಗುತ್ತೆ. (5) ಕಂಟ್ರಾಕ್ಟುದಾರ ಖಾಯಿಷ್ಮಾಡುವ ಸೌದೆ ಮೊತ್ತಕ್ಕೆ ತೇದಾದು ಆದ ದರ ಗಾಡಿ ಭೋಪ ಬಂದಕ್ಕೆ 34 ಸಲೆ ಅಡಿ ಅಥವಾ ಟರ್ ಬಂದಕ್ಕೆ 68 ಸಲೆ ಅಡಿ ಈ ಮೇರೆ ಹಾಸಲ್ ಯಾ ತೀರ್ವೆ ಮೊಬಲಗು ಪಾವತೀ ಮಾಡಿದನಂತರ ರೇಂಜು ಫಾರೆಸ್ಟು ಆಫೀಸರವರು ಬಾಬು ರೂಢಿಸುವದಕ್ಕೆ ಲೈಸೆನ್ಸು ಕೊಡುತ್ತಾರೆ. ರೂಢಿಸಿದ ಬಾಬು ರಕ್ಷಿಸು ಮಾಡಿಕೊಳ್ಳಲು ಸ್ಥಳದಲ್ಲಿರುವ ಫಾರೆಸ್ಟು ನೌಕರರು ರಹದಾರಿ ಕೊಡುತ್ತಾರೆ. (6)

ಕೂಪ್ರ ಯಾ ಕಂಪಾರ್ಟುಮೆಂಟಿನಿಂದ ಚಾಬೀನೆ ಮತ್ತು ಸೌದೆಯನ್ನು ಯಾವದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತಮಯವಾದ ಮೇಲೆ ಸಾಗಿಸಕೂಡದು. ಕತರಾವಣಿ ಕೆಲಸಕ್ಕಾಗಿ ಕೊಟ್ಟು ಇರುವ ಕೂಪಿನಲ್ಲಿಯಾಗಲಿ ಅಥವಾ ಸೌದೆ ಗಾಡಿ ಮಾರ್ಗಗಳಲ್ಲಿಯಾಗಲಿ ಬೇಸಿಗೆಕಾಲದಲ್ಲಿ ಅಂದರೆ (1904ನೆ ಜನವರಿ 1ರ ಲಾಗಾಯತು 1904ನೆ ಮೇ 31ರ ವರಿಗೆ) ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟುದಾರನ ಅಥವಾ ಆತನ ಕಡೆ ಜನರ ಅಜಾಗ್ರತೆಯಿಂದ ಉಂಟಾದ್ದೆಂದು ಡಿ|| ಫಾರೆಸ್ಟು ಆಫಿಸರವರಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬು ಮಾಡಬೇಕು. (7) ಕಂಟ್ರಾಕ್ಟುದಾರನ ಕಡೆ ಗಾಡಿಯವರು ಮೇಲೆ ನಮೂದಾಗುವ ಕೂಪುಗಳ ಹೊರಗಿರತಕ್ಕ ಸ್ಟೇಟು ಯಾ ಡಿಸ್ಟ್ರಿಕ್ಟು ಫಾರೆಸ್ಟಿನಲ್ಲಿ ಹಸಿ ಸೌದೆಯನ್ನು ಕಡದ್ದೇ ಆಗಲೀ ಅಥವಾ ಕಡದು ರಫ್ತು ಮಾಡುವದೇ ಆಗಲೀ ಕಂಡುಬಂದಲ್ಲಿ ಅಂಥಾವರನ್ನು ಫಾರೆಸ್ಟು ರೆಗ್ಯುಲೇಷ್ಯನ ಪ್ರಕಾರ ಪ್ರಾಸಿಕ್ಯೂಷ್ಯನಿಗೆ ಗುರಿಪಡಿಸಲ್ಪಡುತ್ತೆ.

ತಾರೀಖು 31ನೆ ಅಕ್ಟೋಬರ್ 1903.

ಚಿತ್ರದುರ್ಗದ ಡಿಸ್ಟ್ರಿಕ್ಟು ಹರಿಹರದ ಸಬ್ ತಾಲ್ಲೂಕು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಹೊನ್ನಾಳಿ ತಾಲ್ಲೂಕು ಇವೆರಡರಲ್ಲಿಯೂ ಇರುವ ಮಲೇಬೆನ್ನೂರು ಸ್ಟೇಟ್ ಫಾರೆಸ್ಟಿನಲ್ಲಿ ಈ ಕೆಳಗೆ ನಮೂದಿರುವ ದಾರಿ ವಗೈರೆ ಹಕ್ಕನ್ನು ಸಮಸ್ತ ಜನಗಳ ಉಪಯೋಗಕ್ಕೆ ಕೊಟ್ಟಿರುತ್ತೆ.

(1) ಗೋಣಿಗೆರೆಯಿಂದ ಮಲೇಬೆನ್ನೂರಿಗೆ ಕಾಲುದಾರಿ 2 ಗಜ ಅಗಲ, ಸುಮಾರು 3 ಮೈಲು ದೂರ ಫಾಸಲೆ ಉಳ್ಳದ್ದು. ಜನ ಜಾನುವಾರು ಸಂಚರಣೆ ಬಗ್ಗೆ.

(2) ಗುಡ್ಡದ ತುಂಬಿನಕಟ್ಟೆಯಿಂದ ಅರಿಕೆರೆಗೆ ಕಾಲುದಾರಿ 3 ಅಡಿ ಅಗಲ, ಸುಮಾರು 4 ಮೈಲು ದೂರ ಜನ ಜಾನುವಾರು ಸಂಚರಣೆ ಬಗ್ಗೆ.

(3) ಕಾಲುದಾರಿ 2 ಗಜ ಅಗಲ, ಸುಮಾರು 500 ಗಜ ದೂರ ಜನ ಜಾನುವಾರುಗಳ ಉಪಯೋಗದ ಬಗ್ಗೆ. ಈ ದಾರಿಯು ಅರಿಕೆರೆ ಗ್ರಾಮದ ಸರ್ವೆ ನಂಬರು 83ನೆದರ ದಕ್ಷಿಣ ಭಾಗದಲ್ಲಿ ಈ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ ರೋಗದೇವನಕೆರೆ ವರಿಗೆ ಹೋಗುತ್ತದೆ.

(4) ರೋಗದೇವನಕೆರೆಯಿಂದ ಕರಿಯಣ್ಣನಕಟ್ಟೆ ವರಿಗೆ 3 ಅಡಿ ಅಗಲದ ಕಾಲುದಾರಿ ಜನ ಜಾನುವಾರುಗಳ ಉಪಯೋಗದ ಬಗ್ಗೆ ಮೇಲ್ಕಂಡ ನಂಬರು 3ನೆ ದಾರಿಯೇ ಇದು. ಆದರೆ ಇದು ಇನ್ನೂ ಸ್ವಲ್ಪ ಮುಂದೆ ಇರುವ ಕರಿಯಂಣನ ಕಟ್ಟೆಗೆ ಹೋಗುತ್ತದೆ. ಅರಿಕೆರೆ ಸರ್ವೆ ನಂಬರು 83ನೆ ಪೂರ್ವ ಭಾಗದ ಸರಹದ್ದಿನಲ್ಲಿ ಅಂದರೆ ಡಿವಾರ್ಕೇಷ್ಯನ ಲೈನ್ ಒಳಗಡೆಯಲ್ಲಿ ಹೋಗುತ್ತದೆ.

(5) ಗೋಣಿಗೆರೆ ಗ್ರಾಮದ ಸರ್ವೆ ನಂಬರು 31ರಲ್ಲಿ ಗಂಟವನ್ನನ ಕೆರೆಗೆ ಹೋಗುವ ಕಾಲುದಾರಿ ಆರು ಅಡಿ ಅಗಲ, ಬಂದೂವರೆ ಫರಲಾಂಗು ದೂರ, ಇದು ಮೇಲಿನ 1ನೆ ನಂಬರು ದಾರಿಯ ಉಪಶಾಖೆ. ಸರ್ವೆ ನಂಬರು 31ರಲ್ಲಿ ದಕ್ಷಿಣ ಕಡೆ ಬರುತ್ತೆ.

ಈ ಕೆಳಗೆ ನಮೂದಿರುವ ದೇವಸ್ಥಾನಗಳ ಹಕ್ಕು ಕೊಡಲ್ಪಟ್ಟಿದೆ.

ದೇವಸ್ಥಾನದ ಹೆಸರು.	ಸ್ಥಳ.	ಷರಾ. (ದೇವಸ್ಥಾನದ ದಾರಿ)
1. ಕೊಳಲ ಮಲ್ಲಪ್ಪ.	ಗುಡ್ಡದ ತುಂಬಿನಕಟ್ಟೆಯಿಂದ ಸುಮಾರು $2\frac{1}{2}$ ಮೈಲು ದೂರದಲ್ಲಿದೆ. ಸದರಿ ಗ್ರಾಮದ ಸರ್ವೆ ನಂಬರು 32ನೆ ಆಗ್ನೇಯ ಮೂಲೆಗೆ ಸುಮಾರು 1 ಫರಲಾಂಗು ದೂರದಲ್ಲಿದೆ.	12 ಅಡಿ ಅಗಲದ ಮತ್ತೂ ಅರ್ಧ ಮೈಲು ಫಾಸಲೆಯ ಗಾಡಿ ದಾರಿ ಬಿಟ್ಟು ಇದೆ. ಜನ ಜಾನುವಾರು ಗಾಡಿ ಇವುಗಳ ಉಪಯೋಗದ ಬಗ್ಗೆ.
2. ಸಿದ್ದಪ್ಪ.	ಕೋಣನತಲೆ ಗ್ರಾಮದ ನಂಬರು 45ರಲ್ಲಿದೆ.	2 ಗಜ ಅಗಲ ಮತ್ತು ಅರ್ಧ ಮೈಲು ದೂರದ ಕಾಲುದಾರಿ ಜನ ಜಾನುವಾರು ಉಪಯೋಗದ ಬಗ್ಗೆ ಮಾತ್ರ ಈ ದಾರಿಯು ಡಿವಾರ್ಕೇಷ್ಯನ ಲೈನಿಂದ ದೇವಸ್ಥಾನಕ್ಕೂ ಅದರ ಪಶ್ಚಿಮ ಭಾಗಕ್ಕೂ ಕೊಟ್ಟಿರುತ್ತೆ.

ಕೆ. ಶಾಮೈಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.